ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಕೃಷಿ ನೀತಿಯನ್ನು ಜಾರಿಗೆ ತರುವ ಮುನ್ನ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ 13.93 ಲಕ್ಷ ಹೆಕ್ಟೇರ್‌ಗಳಿದ್ದು, ಉತ್ಪಾದನೆ 109.47 ಲಕ್ಷ ಟನ್‌ಗಳಷ್ಟಿತ್ತು. 1996-97ನೇ ಸಾಲಿಗೆ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ ಅನುಕ್ರಮವಾಗಿ 15.80 ಲಕ್ಷ ಹೆ. ಮತ್ತು 124.04 ಲಕ್ಷ ಟನ್‌ಗಳಿಗೆ ಹೆಚ್ಚುವರಿಯಾಗಿರುತ್ತದೆ. ಹಾಗೂ 1997-98ನೇ ಸಾಲಿಗೆ ತೋಟಗಾರಿಕೆ ಬೆಳೆ ಪ್ರದೇಶವು 17.17 ಲಕ್ಷ ಹೆ. ಮತ್ತು ಉತ್ಪಾದನೆ 128.06 ಲಕ್ಷ ಟನ್‌ಗಳಿಗೆ ಅಂದಾಜಿಸಲಾಗಿದೆ.

ರಾಜ್ಯ ಕೃಷಿ ನೀತಿಯಲ್ಲಿ ತಾಳೆ ಬೆಳೆ ಪ್ರದೇಶವನ್ನು 20,000 ಹೆ. ಪ್ರದೇಶದಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿತ್ತು, ಆದರೆ ಈ ಯೋಜನೆಯಡಿ ಭಾಗವಹಿಸಿದ್ದ ಕೆಲವು ಕಂಪನಿಗಳು ಹಿಂದಕ್ಕೆ ಸರಿದಿದ್ದರಿಂದ ಈ ಯೋಜನೆಯ ಅಭಿವೃದ್ಧಿಗೆ ಒಟ್ಟಾರೆ ಹಿನ್ನೆಡೆ ಉಂಟಾಗಿರುತ್ತದೆ. ಆದಾಗ್ಯೂ ಈವರೆಗೂ 8000 ಹೆ. ಪ್ರದೇಶದಲ್ಲಿ ತಾಳೆ ಬೆಳೆಯನ್ನು ರೈತರ ಜಮೀನಿನಲ್ಲಿ ತರಲಾಗಿದೆ. ಈಗ ಮತ್ತೆ ಆಸಕ್ತಿ ಇರುವ ಕಂಪನಿಗಳನ್ನು ಗುರುತಿಸಿ ರಾಜ್ಯದ ವಿವಿಧ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದ್ದು, ಈ ಕಂಪನಿಗಳು ಕಾರ್ಯೋನ್ಮುಖವಾಗಿವೆ.

ಅ) ಹೊಸ ಕೃಷಿ ನೀತಿ ಘೋಷಣೆಯಾದ ನಂತರ ಕೃಷಿ ಇಲಾಖೆಯಲ್ಲಿ- 317 ಮಂದಿಯನ್ನು ಮತ್ತು ತೋಟಗಾರಿಕೆ ಇಲಾಖೆಯಲ್ಲಿ 388 ಮಂದಿಯನ್ನು ವಿವಿಧ ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ.

ಆ) ರಾಜ್ಯದಲ್ಲಿ ಹಾಲಿ 4853 ಕೃಷಿ ಸಹಾಯಕರ ಹುದ್ದೆಗಳಿರುತ್ತವೆ. ಅವರೆಲ್ಲರೂ ಕೃಷಿ ಪದವೀಧರರಲ್ಲ.

ಇ) ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 96 ಮಂದಿ ಕೃಷಿ ಸಹಾಯಕರು ನಿವೃತ್ತರಾಗಿರುತ್ತಾರೆ.

ಈ) ಯಾರನ್ನೂ ನೇಮಕ ಮಾಡಿರುವುದಿಲ್ಲ.

ಬೆಂಗಳೂರು ನಗರ ಸಾರಿಗೆ ಕಾವೇರಿ ಮಹಡಿ ಬಸ್.

1554(2145) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಲು ಬೆಂಗಳೂರು ನಗರ ಸಾರಿಗೆ ಕಾವೇರಿ ಬಸ್ ಸೌಲಭ್ಯವನ್ನು ಒದಗಿಸುತ್ತಿದೆಯೇ?

ಅ) ಹಾಗಿದ್ದಲ್ಲಿ ಈ ಬಸ್ ಯಾವ ಯಾವ ಜಾಗಗಳಿಗೆ ಸಂದರ್ಶಿಸುತ್ತದೆ.

ಇ) ಈ ಬಸ್ಸಿನಲ್ಲಿ ಪ್ರಯಾಣಿಸಲು ನಿಗದಿಪಡಿಸಿರುವ ಶುಲ್ಕವೆಷ್ಟು?

ಈ) ಈ ಬಸ್‌ಗಳು ಯಾವ ಸ್ಥಳದಿಂದ ಹೊರಡುತ್ತವೆ?

ಉ) ಈ ಬಸ್ಸುಗಳನ್ನು ಜಯನಗರ ಬಸ್ ನಿಲ್ದಾಣದಿಂದ ಹೊರಡುವಂತೆ ಮಾಡಲು ಉದ್ದೇಶಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗಿನಿಂದ ಮಾಡಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ — ಹೌದು —

ಆ) ಈ ಬಸ್ಸು ಕೆಂಪೇಗೌಡ ಬಸ್ ನಿಲ್ದಾಣದಿಂದ ಹೊರಟು ವಿಧಾನಸೌಧ, ವಿಶ್ವೇಶ್ವರಯ್ಯ ಮ್ಯೂಸಿಯಂ, ವೆಂಕಟಪ್ಪ ಆರ್ಟ್ ಗ್ಯಾಲರಿ, ಮಹಾತ್ಮಗಾಂಧಿ ಪ್ರತಿಮೆ, ಮೆಯೋಹಾಲ್, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್, ಕೆಂಗಲ್ ಹನುಮಂತಯ್ಯ ರಸ್ತೆ, ಲಾಲ್‌ಬಾಗ್, ಟೌನ್‌ಹಾಲ್ ಮೂಲಕ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ತಲುಪುತ್ತದೆ.

ಇ) ಈ ಬಸ್ಸಿನಲ್ಲಿ ಪ್ರಯಾಣಿಕರು ಸುತ್ತುವಳಿ ಒಂದಕ್ಕೆ ವಯಸ್ಕರಿಗೆ ರೂ.20-00 ಮಕ್ಕಳಿಗೆ ರೂ.10-00 ದರ ನಿಗಧಿಪಡಿಸಿದೆ.

ಈ) ಈ ಬಸ್ಸು ಕೆಂಪೇಗೌಡ ಬಸ್ ನಿಲ್ದಾಣದಿಂದ ಹೊರಡುತ್ತದೆ.

ಉ) ಜಯನಗರ ಬಸ್ ನಿಲ್ದಾಣದಿಂದ ಮೇಲ್ಛಾವಣಿ ರಹಿತ ಮಹಡಿ ಬಸ್ಸನ್ನು ಆಚರಣೆ ಮಾಡಲು ಹಾಲಿ ಬಸ್ಸುಗಳು ಆಡಚಣೆಯಾಗುತ್ತಿರುವ ರಸ್ತೆಗಳಲ್ಲಿ, ರಸ್ತೆ ಬದಿಯ ರಸ್ತೆಗಳ ಕೊಂಬೆಗಳ ಮತ್ತು ವಿದ್ಯುತ್ ತಂತಿಗಳ ಅಡಚಣೆ ಇರುವುದರಿಂದ ಈ ಮಾದರಿಯ ಬಸ್ಸುಗಳನ್ನು ಜಯನಗರ ಬಸ್ ನಿಲ್ದಾಣದಿಂದ ಆಚರಣೆ ಮಾಡುವ ಉದ್ದೇಶವಿರುವುದಿಲ್ಲ.

ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳು.

1555(2174) ಶ್ರೀ ಬಿ. ಶಿವರಾಮು (ಗಂಡಸಿ) :— ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1999-2000ನೇ ಸಾಲಿನಲ್ಲಿ ಆಶ್ರಯ ಯೋಜನೆಯಡಿ ಮಂಜೂರಾದ ಮನೆಗಳ ಒಟ್ಟು ಸಂಖ್ಯೆ ಎಷ್ಟು ;

ಆ) ಮಂಜೂರಾದ ಮನೆಗಳನ್ನು ಹಂಚಲಾದ ಕ್ಷೇತ್ರಗಳು ಯಾವುವು ;